# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/120/2015-16 ದಿನಾಂಕ:28.07.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಚಂದ್ರಕಲಾ ಗಂಡ ಜ್ಯೋತಿ ಲಿಂಗನಗೌಡ<br>ಗ್ರಾಮ:-ತೋಣಸಿಗೇರಿ ತಾ:-ಸಂಡೂರು<br>[ಕೆ.ಪಿ.ಬಿ, ವಕೀಲರು, ಹ.ಬೊ.ಹಳ್ಳಿ] | ಗಜಾಪುರದ ಮಂಜುಳ ಗಂಡ ಗಜಾಪುರದ<br>ಗುರುಬಸವರಾಜ<br>ಗ್ರಾಮ:-ಕೋಗಳಿ ತಾ:-ಹೆಚ್.ಬಿ.ಹಳ್ಳಿ<br>[ಜಯಮ್ಮ ಎಸ್, ವಕೀಲರು, ಕೂಡ್ಲಿಗಿ] |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಕೋಗಳಿ | 329/6 | 1-45 | ಖುಷ್ಕಿ |
| 2. | " | " | 329/ಎ | 2-25 | " |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ತೋಣಸಿಗೇರಿ ಗ್ರಾಮದ ನಿವಾಸಿಯಾದ ಚಂದ್ರಕಲಾ ಗಂಡ ಜ್ಯೋತಿ ಲಿಂಗನಗೌಡ ಇವರು ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-04254-2015-2016 ದಿನಾಂಕ:01.03.2016 ರಂದು ನೋಂದಣಿಯಾಗಿರುತ್ತದೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:02.03.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:29.03.2016 ರಂದು ಮಂಜುಳ ಗಂಡ ಗಜಾಪುರದ ಗುರುಬಸವರಾಜ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.39/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:09.06.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:09.06.2016 ರಿಂದ 27.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ದಿನಾಂಕ:09.06.2016 ರಂದು ಅರ್ಜಿದಾರರು ಮತ್ತು ಪಟ್ಟಾದಾರರಾದ ಗಜಾಪುರದ ಶಂಕ್ರಪ್ಪ ಇವರು ಹಾಜರಾಗಿ ಹೇಳುವಂತೆ; ಸದರಿ ಜಮೀನು ನನ್ನ ನಾಲ್ಕನೇ ಮಗಳಿಗೆ ದಾನವಾಗಿ ಬಿಟ್ಟಿರುವುದಾಗಿ ಹಾಗೂ ಇವರು ನನ್ನನ್ನು ಸಾಕುತ್ತಿದ್ದಾರೆ, ಆದ ಕಾರಣ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆಯನ್ನು ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಅರ್ಜಿದಾರರು ಹಾಜರಾಗಿ ಹೇಳುವಂತೆ; ಸದರಿ ಜಮೀನು ನೋಂದಾಯಿತ ದಾನ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ದಿನಾಂಕ:23.06.2016 ರಂದು ತಕರಾರುದಾರರು/ಪರ ವಕೀಲರು ಹಾಜರಾಗಿ ಹೇಳುವಂತೆ; ಸದರಿ ಜಮೀನು 329 ಒಟ್ಟು ವಿಸ್ತೀರ್ಣ 3-70 ಎಕರೆ ಜಮೀನು ಈಗಾಗಲೇ ಒ.ಎಸ್.ಸಂಖ್ಯೆ 167/2015 ಸಿವಿಲ್ ನ್ಯಾಯಾಲಯ, ಹ.ಬೊ.ಹಳ್ಳಿಯಲ್ಲಿ ಪ್ರಕರಣ ನಡೆಯುತ್ತಿರುವುದರಿಂದ

-ಸದರಿ ಪ್ರಕರಣವನ್ನು ಕಾಯ್ದುಕೊಳ್ಳುವಂತೆ ದೃಢೀಕೃತವಲ್ಲದ ಪ್ರತಿಗಳನ್ನು ಹಾಜರು ಪಡಿಸಿ ಹೇಳಿಕೆಯನ್ನು ನೀಡಿರುತ್ತಾರೆ.

ಅರ್ಜಿದಾರರು ಹೇಳುವಂತೆ; ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ದಾನ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆಯನ್ನು ನೀಡಿ ಸದರಿ ಜಮೀನಿನ ದಾನ ಪತ್ರ ಹಾಗೂ ಈ ಹಿಂದಿನ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತಾರೆ.

ಪ್ರಕರಣದಲ್ಲಿ ದಿನಾಂಕ:14.07.2016 ರಂದು ಅರ್ಜಿದಾರರ ಪರ ವಕೀಲರು ಹಾಜರಾಗಿ ಹೇಳುವಂತೆ; ಐ.ಎಲ್.ಆರ್.2000 ಕೆ.ಆರ್.ಆರ್.184 ರನ್ವಯ ನೋಂದಾಯಿತ ದಸ್ತಾವೇಜು ಪ್ರಕಾರ ಮತ್ತು ಐ.ಎಲ್.ಆರ್. 2006 ಕೆ.ಎ.ಆರ್.3400 ರನ್ವಯ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹಾಗೂ ಸದರಿ ಜಮೀನು ಸ್ವಯಾರ್ಜಿತ ಜಮೀನು ಆಗಿರುತ್ತದೆ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು/ಪರ ವಕೀಲರು ಮತ್ತು ತಕರಾರುದಾರರು/ ಪರ ವಕೀಲರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-04254-2015-2016 ದಿನಾಂಕ:01.03.2016 ರಂದು ನೋಂದಣಿಯಾಗಿರುತ್ತದೆ. ಪಟ್ಟಾದಾರರಾದ ಗಜಾಪುರದ ಶಂಕ್ರಪ್ಪ ತಂದೆ ಲೇಟ್ ಕೊಟ್ರಬಸಪ್ಪ, ಕೋಗಳಿ ಇವರ ವಂಶವೃಕ್ಷದಂತೆ ವಾರಸುದಾರರಾದ ತನ್ನ ನಾಲ್ಕನೇ ಮಗಳಾದ ಚಂದ್ರಕಲಾ ಗಂಡ ಜ್ಯೋತಿಲಿಂಗನಗೌಡ ಇವರಿಗೆ ದಾನಕ್ಕೆ ನೋಂದಣಿ ಮಾಡಿಸಿರುತ್ತಾರೆ. ಪ್ರಯುಕ್ತ, ಅರ್ಜಿದಾರರ ಹೆಸರಿಗೆ ನೋಂದಾಯಿತ ದಾನ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಮತ್ತು ಎಂ.ಆರ್.ನಂ.39/2015-16 ರ ಪ್ರಕಾರ, ಕೋಗಳಿ ಗ್ರಾಮದ ಸ.ನಂ.329/6 ವಿಸ್ತೀರ್ಣ 1-45, ಮತ್ತು ಸ.ನಂ.329/ಎ ವಿಸ್ತೀರ್ಣ 2-25 ಎಕರೆ ಜಮೀನು ಚಂದ್ರಕಲಾ ಗಂಡ ಜ್ಯೋತಿಲಿಂಗನಗೌಡ ಇವರ ಹೆಸರಿಗೆ ನೋಂದಾಯಿತ ದಾನ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:28.07.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

28/7/16
[ಪಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಶೀಲ್ದಾರರು,
ನಾಡ ಕಛೇರಿ, ಕೋಗಳಿ

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.